ಪ್ರಹ್ಲಾದ ಡಿ.ಎಂ. ವಿಜಯನಗರ ಜಿಲ್ಲೆಯ ಕೂಡ್ಲಿಗಿಯ ಪುಟ್ಟ ಊರು ಸುಟ್ಟ ಕರ್ನಾರಹಟ್ಟಿಯವರು. ಪ್ರಸ್ತುತ ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಕನ್ನಡ ಬೋಧಕರು. 'ಮೀನುಗಾರನ ಮೈನಕ್ಕಿ' (ಕವನ ಸಂಕಲನ) 'ಮ್ಯಾಸ ಕಂಪಳದ ಚಹರೆ', 'ಕಾಡು ಹಾದಿಯ ಹಾಡು ಪಾಡು', 'ಮ್ಯಾಸಬೇಡರ ಚಾರಿತ್ರಿಕ ಕಥನ' (ಸಂಶೋಧನೆ) ಅವರ ಪ್ರಮುಖ ಕೃತಿಗಳು.

ತೊಡಗಿದರು. 'ಅವರಪ್ಪ ದುರ್ಗವ್ವನ ಜಾತ್ರೆಯಲ್ಲಿ ವ್ರತ ಭಂಗ ಮಾಡಿ ಸತ್ತೋದ, ಇವನು ಮೊನ್ನೆ ದುರ್ಗವ್ವನ ಜಾತ್ರೆಲ್ಲಿ, ತೃಪ್ತಿ ಅಗೋ ಹಾಗೆ ಸರಿಯಾದ ಕಟ್ಟು ನಿಟ್ಟಿಂದಯಿರದೇ ಒಪ್ಪತ್ತಿನ ಹರಕೆಯೊಂದಿಗೆ ಚರಗದ ಬುಟ್ಟಿ ಹೊತ್ತುಕೊಂಡು, ಮಾರವ್ವನ ಕಾರ್ಯಕ್ಕೆ ಏಕಿಬೀಕಿ ಮಾಡಿ, ಕುಡಿದ ಅಮಲಿನಲ್ಲೇ ದುರ್ಗವ್ವನಿಗೆ ಚರಗ ತಿರುಗ್ಯಾನೇ, ಆ ಮಾರಿನೇ ಇವನನ್ನ ಈ ಸ್ಥಿತಿಗೆ ತಂದವಳೆ' ಎಂದು ಎಲುಬಿಲ್ಲಾದ ನಾಲ್ಗೆಗೆ ಕೆಲ್ಸ ಕೊಟ್ಟದ್ರು, ಇಲಿ ಹೋದ್ರೆ ಹುಲಿ ಹೋಯ್ಯಿತ್ತು ಎನ್ನುವಂತೆ. ಗುಂಪು ಗುಂಪಾಗಿ ಕರಿಯನ ಸಂಕಟವನ್ನು ಮೀರಿ ಆಡಿಕೊಳ್ಳುವುದನ್ನು ಸಂಕವ್ವ ಕೇಳಿಸಿಕೊಂಡ್ಲು, ಅಷ್ಟರೊಳಗೆ ಗೌಡ್ರು ಬಂದು ಕರಿಯನನ್ನು ಉಗುದು ಉಪ್ಪಾಕಿ ಯಾವುದೋ ಆಳಿಗೆ ಬಂಡಿ ಕಟ್ಟೋಕೆ ಹೇಳಿದ. ಅವ್ನ ಪ್ರಾಣ ಉಳಿಸಿಕೊಳ್ಳೋಕೆ ಸಂಕವ್ವ ಗೋಳೋ ಎಂದು ಕಣ್ಣೀರಿನ ಗೋಗರೆದಳು. ಗೌಡ್ರು ಕೊಟ್ಟ ರೊಕ್ಕ ಸಾಲ್ದೆ, ಗೌಡ್ರು ಹೊಲದಲ್ಲಿ ಕ್ಯಾಮೆ ಮಾಡಿ, ತನ್ನ ಬುದ್ಧಿವಂತಿಕೆಯಿಂದ ಸೆರಗಲ್ಲಿ ಬಿಗಿದುಕೊಂಡಿದ್ದ ನಾಲ್ಕೈದು ಕಾಸನ್ನು ಸೇರಿಸಿಕೊಂಡು ಪ್ಯಾಟೆಲಿರುವ ಸರ್ಕಾರಿ ದವಾಖಾನೆಗೆ ಗಂಡನನ್ನು ಸೇರಿಸಿಕೊಂಡ್ಲು.

ಕರಿಯನಿಗೂ ದುರ್ಗವ್ವನಿಗೂ ಇರುವ ನಂಟೆಂದರೆ ಕರಿಯನ ಮನೆತನವು ಹೊಲೇರ ಕೇರಿಯಲ್ಲೇ ಒಂದು ಕಾಲದಾಗ ಶ್ರೀಮಂತ ಮನೆತನವಾಗಿತ್ತು, ಇವರೆಲ್ಲಾ ಅಣ್ಣ- ತಮ್ಮಂದಿರು ಕೂಡಿ ದೊಡ್ಡ ಹಟ್ಟಿ ಕಟ್ಗೋ ಅಷ್ಟು ಕೂಡುಕುಟುಂಬ. ಭೀಮಪ್ಪ ಕುಟುಂಬದವರು ಎಂದು ಕರೆಯುತ್ತಿದ್ರು. ಭೀಮಪ್ಪನೇ ಕರಿಯನ ತಂದೆ. ಈತ್ನೆ ಹೊಲೇರ ಕೇರಿಯಲ್ಲಿ ಯಾವುದೇ ಗಲಾಟೆಗದ್ಲಾದ್ರೂ, ಅವರಿಗೆಲ್ಲಾ ಪಂಚಾಯ್ತಿ ಗಿಂಚಾಯ್ತಿ ಹೇಳುತಿದ್ನು. ಹಟ್ಟಿಲಿ ನಡೆಸುವ ಮದುವೆ, ಮುಂಜಿ ಪುಣ್ಯದ ಕೆಲಸ ಮುಂದೆ ನಿಂತು ಮಾಡಿಸುವಾತ. ಒಮ್ಮೆ ದುರ್ಗವ್ವನ ಚರಗದ ಕಾರ್ಯ ಯಾರಿಗೆ ವಹಿಸೋದೆಂದು ಪಂಚಾಯ್ತಿ ಮಾಡಿದಾಗ ಇಡೀ ಊರಿಗೆ ಊರೇ ಈ ಮನೆತನದವರೇ ನಮ್ಮೂರ ಜೋಡಿ ದುರಗವ್ವನ ಜಾತ್ರೆಲ್ಲಿ ಚರಗ ಬುಟ್ಟಿ ಹೊತ್ತು ಊರಿಗೆಲ್ಲಾ ಚರಗ ತಿರುಗಬೇಕೆಂದು ಹೇಳಿದ್ರು. ಆಗ ಭೀಮಪ್ಪ 'ಇಂಥ ಪುಣ್ಯದ ಕೆಲಸ ಕೈಗೂಡಿ ಬಂದಾಗ ಬಿಡೋಕಾದೀತ ನನ್ನೊಡೆಯರೆ' ಎಂದು ಎದೆಯುಸಿರು ಬಿಡುತ್ತ. ನೆರೆದ ಗೌಡ ಗೊಂಚಿಕಾರರ ಮಾತಿಗೆ ಒಪ್ಪಿಕೊಂಡರು. ಈ ಚರಗ ಕಾರ್ಯ ಮಾಡುವಾಗ ಆ ಮನೆತನದವರು ಬಹಳ ಕಟ್ಟುನಿಟ್ಟನಾಚರಣೆಗಳ್ನ, ನಿಷೇಧಗಳನ್ನ ಪಾಲಿಸಬೇಕಾಗಿತ್ತು. ಭೀಮಪ್ಪನು ಅಷ್ಟೇ ಕಟ್ಟುನಿಟ್ಟನಿಂದ ಪಾಲಿಸಿಕೊಂಡು ಬರುತ್ತಿದ್ದ.

